# ಜೈನ್ ವಿಶ್ವವಿದ್ಯಾಲಯದಲ್ಲಿ ನುಡಿ ಸಂಭ್ರಮದ 'ಸುಧೆ'...!

ಸಂಕ್ರಾಂತಿ ಮುಗಿದು ಒಂದು ವಾರದ ನಂತರವೂ, ಜೈನ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್ ಸ್ಟಡೀಸ್‌ನಲ್ಲಿ ಹಬ್ಬದ ಸಂಭ್ರಮ ಇನ್ನೂ ಮನೆಮಾಡಿತ್ತು. ಕನ್ನಡ ನಾಡು–ನುಡಿ ಹಾಗೂ ಕನ್ನಡತನವನ್ನು ವಿದ್ಯಾರ್ಥಿಗಳಲ್ಲಿ ಜಾಗೃತಗೊಳಿಸುವ ಸಲುವಾಗಿ, ವಿಶ್ವವಿದ್ಯಾಲಯದ ಕನ್ನಡ ವೇದಿಕೆ ಹಮ್ಮಿಕೊಂಡಿದ್ದ 'ನುಡಿ ಸಂಭ್ರಮ' ಕಾರ್ಯಕ್ರಮ ಯಶಸ್ವಿಯಾಗಿ ಮೂಡಿಬಂದಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ಅಭಿನೇತ್ರಿ ಶ್ರೀಮತಿ ಸುಧಾ ಬೆಳವಾಡಿಯವರು, "ವಿದ್ಯಾರ್ಥಿಗಳ ಬದುಕಿನಲ್ಲಿ ಕೇವಲ ಶೈಕ್ಷಣಿಕ ಶಿಕ್ಷಣ ಮಾತ್ರ ಧ್ಯೇಯವಾಗಬಾರದು. ಸಂಗೀತ, ನಟನೆ, ಇತ್ಯಾದಿ ಹವ್ಯಾಸಗಳು ಇದ್ದರೆ ಒಳಿತು. ಉತ್ತಮ ಹವ್ಯಾಸಗಳು ವ್ಯಕ್ತಿಯ ಮಾನಸಿಕ ವಿಕಾಸಕ್ಕೆ ಎಡೆಮಾಡಿಕೊಡುತ್ತವೆ ಎಂದು ಅಭಿಪ್ರಾಯಪಟ್ಟರು. ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿರುವ ಅನಂತಮೂರ್ತಿ, ಲಂಕೇಶ್, ಬಿ.ಎಂ.ಶ್ರೀ ಮುಂತಾದವರೆಲ್ಲರೂ ಗಳಿಕೆಗಾಗಿ ಇಂಗ್ಲೀಷ್ ಅವಲಂಭಿಸಿದ್ದರೂ, ಕಲಿಕೆಗಾಗಿ ಅಂದರೆ, ಮನದ ಅಭಿವ್ಯಕ್ತಿಗಾಗಿ ಕನ್ನಡವನ್ನೇ ಆಶ್ರಯಿಸಿದ್ದರು. ಆದ್ದರಿಂದ ಇಂಗ್ಲೀಷ್ ಬೇಡವೆಂಬ ತಿರಸ್ಕಾರ ಬೇಡ, ಆದರೆ, ಅಂತರಂಗದ ಭಾವಾಭಿವ್ಯಕ್ತಿಗೆ ಮಾತೃಭಾಷೆ ಸಹಕಾರಿಯಾಗುತ್ತದೆ" ಎಂದರು.

**ವಿದ್ಯಾರ್ಥಿಗಳು ನಡೆಸಿಕೊಟ್ಟ ಭರತನಾಟ್ಯ ನೃತ್ಯ,ಭಾವಗೀತಾ ಗಾಯನ, ಸಿನಿಮಾ ಗಾಯನ ಮತ್ತು ವಾದ್ಯವೃಂದ ಕಾರ್ಯಕ್ರಮಗಳು ಪ್ರೇಕ್ಷಕರನ್ನು ಮನಸೆಳೆದವು.**

ಡಾ. ಬಿ ಎ ವಾಸು, ಕೇಂದ್ರ ಮುಖ್ಯಸ್ಥರು, ಸ್ಕೂಲ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್ ಸ್ಟಡೀಸ್, ಜೈನ್ ವಿಶ್ವವಿದ್ಯಾಲಯ, ಪ್ರೊ. ನಳಿನಿ ಸತೀಶ್‌ಚಂದ್ರ ಉಪಸ್ಥಿತರಿದ್ದರು.